# ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಕಲೇಶಪುರ.

## ಸಿಸಿ: 327/2022

ಪಿರ್ಯಾದುದಾರರು ಃ ಶ್ರೀ ಉದಯ ಕೆ.ಜೆ.
ಬಿನ್ ಎಸ್.ಆರ್. ಜೋಯಪ್ಪ,
**48** ವರ್ಷ,
ವಾಸಃ ಕಳಲೆ ಗ್ರಾಮ,
ಯಸಳೂರು ಹೋಬಳಿ,
ಸಕಲೇಶಪುರ ತಾಲ್ಲೂಕು,
ಹಾಸನ ಜಿಲ್ಲೆ.

-ವಿರುದ್ಧ-

ಆರೋಪಿ ಃ ಯಶಸ್ ಹೆಚ್. ಎನ್.
ಬಿನ್ ನಾಗರಾಜ ವಿ.ಎಸ್.,
24 ವರ್ಷ,
ವಾಸಃ ಜವೇನಹಳ್ಳಿ ಮಠದ ಹತ್ತಿರ,
ಲಕ್ಷ್ಮೀಪುರ ಬಡಾವಣೆ,
**1** ನೇ ಕ್ರಾಸ್,
ಹಾಸನ ಟೌನ್,
ಹಾಸನ ಜಿಲ್ಲೆ.

### ಆಪಾದನೆ

ಆರೋಪಿಯಾದ ನೀವು ಹಾಗೂ ಫಿರ್ಯಾದುದಾರರು ಪರಿಚಯಸ್ಥರಾಗಿದ್ದು, ಫಿರ್ಯಾದುದಾರರಿಂದ ಪಡೆದುಕೊಂಡಿರುವ ಮುಂಗಡ ಹಣವಾದ **3,50,000/-** ಗಳನ್ನು ಸದರಿ ಒಪ್ಪಂದದ ಪತ್ರದಲ್ಲಿ ಕಾಣಿಸಿ ನಮೂದು ಮಾಡಿ ಒಪ್ಪಂದ ಪತ್ರವನ್ನು ಬರೆದಿರುತ್ತಾರೆ. ಆರೋಪಿಯು ರೂ. **3,50,000/-** ಗಳನ್ನು ಆರು ತಿಂಗಳಲ್ಲಿ ಕೊಡುವುದಾಗಿ ಒಪ್ಪಿಕೊಂಡು ದಿನಾಂಕ **30.04.2021** ರವರೆಗೆ ಕಾಲಾವಕಾಶವನ್ನು ಪಡೆದುಕೊಂಡಿರುತ್ತಾರೆ. ಆರೋಪಿಯು ಪಿರ್ಯಾದಿಯ ಹೆಸರಿಗೆ ಎರಡು ಚೆಕ್ಕುಗಳನ್ನು ನೀಡಿರುತ್ತಾರೆ. ಆರೋಪಿಯಾದ ನೀವು ನಿಮ್ಮ ಖಾತೆ ಹೊಂದಿರುವ ಕಾರ್ಪೋರೇಷನ್ ?ಬ್ಯಾಂಕ್, ಹಾಸನ ಶಾಖೆಯ ಚೆಕ್ ಸಂಖ್ಯೆಃ 272159 ರಲ್ಲಿ ರೂ. 1,75,000/- ಗಳ ನಮೂದಿಸಿದ **05.04.2021** ಹಾಗೂ

ಕಾರ್ಪೋರೇಷನ್ ?ಬ್ಯಾಂಕ್, ಸಾಲಗಾಮೆ ರೋಡ್ ಶಾಖೆಯ ಚೆಕ್ ಸಂಖ್ಯೆಃ 272160 ರಲ್ಲಿ ರೂ. 1,75,000/- ಗಳ ನಮೂದಿಸಿದ **05.04.2021** ರ ದಿನಾಂಕದ ಸಹಿ ಮಾಡಿದ ಎರಡು ಚೆಕ್ಕನ್ನು ಪಿರ್ಯಾದುದಾರರಿಗೆ ನೀಡಿ ಅದನ್ನು ನಗದೀಕರಿಸಿಕೊಳ್ಳುವಂತೆ ಹೇಳಿರುತ್ತೀರಿ. ಅದರಂತೆ ಪಿರ್ಯಾದುದಾರರು ನೀವು ಕೊಟ್ಟ ಎರಡು ಚೆಕ್ಕನ್ನು ಪಿರ್ಯಾದುದಾರರು ಖಾತೆ ಹೊಂದಿರುವ ಹೊಸೂರು ಶಾಖೆಯ ಬ್ಯಾಂಕ್ ಆಫ್ ಬರೋಡಾ ಬ್ಯಾಂಕ್ (ವಿಜಯ ಬ್ಯಾಂಕ್) ಗೆ ದಿನಾಂಕಃ 05.04.2021 ರಂದು ನಗದೀಕರಣಕ್ಕಾಗಿ ಸಲ್ಲಿಸಿದಾಗ, ಬ್ಯಾಂಕಿನವರು "**Payment Stopped by drawer**" ಎಂಬ ಹಿಂಬರದೊಂದಿಗೆ ದಿನಾಂಕಃ 17.04.2021 ರಂದು ಎರಡು ಚೆಕ್‌ನ್ನು ವಾಪಸ್ಸು ನೀಡಿರುತ್ತಾರೆ, ನಂತರ ಪಿರ್ಯಾದುದಾರರು ಸದರಿ ವಿಚಾರವನ್ನು ನಿಮಗೆ ತಿಳಿಸಿದ್ದು ಆರೋಪಿಯಾದ ನೀವು ಇದಕ್ಕೆ ಸರಿಯಾಗಿ ಪ್ರತಿಕ್ರಿಯಿಸಿರುವುದಿಲ್ಲ. ತದನಂತರ ಪಿರ್ಯಾದುದಾರರು ಆರೋಪಿಯಾದ ನಿಮಗೆ ವಕೀಲರಿಂದ ತ್ವರಿತ ಹಾಗೂ ನೋಂದಣಿ ಅಂಚೆ ಮೂಲಕ ದಿನಾಂಕಃ 13.05.2021 ರಂದು ಕಾನೂನು ತಿಳುವಳಿಕೆ ಪತ್ರವನ್ನು ದಿನಾಂಕ **24.05.2021** ರಂದು ನೀಡಿರುತ್ತಾರೆ, ಅದು ನಿಮಗೆ ತಲುಪಿದ್ದು, ಆರೋಪಿಯಾದ ನೀವು ಕಾನೂನು ತಿಳುವಳಿಕಾ ಪತ್ರಕ್ಕೆ ಯಾವುದೇ ಪ್ರತ್ಯುತ್ತರವನ್ನು ನೀಡಿರುವುದಿಲ್ಲ ಹಾಗೂ ಚೆಕ್ಕಿನ ಯಾವುದೇ ಹಣವನ್ನು ಮರುಪಾವತಿ ಮಾಡಿರುವುದಿಲ್ಲ. ಆದಕಾರಣ ನೀವು ಕಲಂ.138 ಎನ್.ಐ. ಆಕ್ಟ್ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

ಪ್ರಶ್ನೆ1. ಃ ಮೇಲೆ ಹೇಳಿದ ವಿಷಯಗಳು ಅರ್ಥವಾಯಿತೇ?

ಉತ್ತರ ಃ

ಪ್ರಶ್ನೆ2.ಃ ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ

ದಿನಾಂಕಃ **19.07.2024**

ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ. ಸಕಲೇಶಪುರ.